**ಪಾಠ–2** **ಅಕ್ಟೋಬರ್ 2–8**

# ಮೋಶೆಯ ಐತಿಹಾಸಿಕ ಪಾಠ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : **ಧರ್ಮೋಪದೇಶಕಾಂಡ 1–3, ವಿಮೋಚನಕಾಂಡ 32:29–32, ಅರಣ್ಯಕಾಂಡ 14, ಎಫೆಸ 3:10, ಆದಿಕಾಂಡ 15:1–16, ಯೋಹಾನನು 14:9.**

**ಸ್ಮರಣವಾಕ್ಯ : "ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು, ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು ಹೇಗೆಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು. ಆ ಬಂಡೆ ಕ್ರಿಸ್ತನೇ** (1 ಕೊರಿಂಥ 10:3,4).

ಮೋಶೆಯ ಇಸ್ರಾಯೇಲ್ಯರಿಗೆ ಮಾಡಿದ ಉಪನ್ಯಾಸಗಳು (ಧರ್ಮೋಪದೇಶಕಾಂಡ 1:1) ಹೀಗೆ ಧರ್ಮೋಪದೇಶಕಾಂಡ ಪುಸ್ತಕವು ಪ್ರಾರಂಭವಾಗುತ್ತದೆ.

ಈ ಪ್ರಾರಂಭದ ವಾಕ್ಯದಿಂದ ತನ್ನ ಮರಣದ ತನಕ ಮೋಹಬ್ ಪ್ರಾಂತ್ಯದವರೆಗೆ (ಧರ್ಮೋಪದೇಶಕಾಂಡ 34:5) ಧರ್ಮೋಪದೇಶಕಾಂಡ ಪುಸ್ತಕವು ವಿಚಾರವಾಗಿಯೂ ಯೇಸುಕ್ರಿಸ್ತನ ಬಗ್ಗೆ ಆತನೆ ನಮ್ಮನ್ನು ಉಂಟುಮಾಡಿದಾತನು (ಆದಿಕಾಂಡ 1:2; ಯೋಹಾನ 1:1–3 ನಮ್ಮನ್ನು ಪರಿಪಾಲಿಸುವನು (ಕೊಲೊಸ್ಸೆ 1:15–17, ಇಬ್ರಿಯ 1:3). ನಮ್ಮನ್ನು ವಿಮೋಚಿಸಿದವನು (ಯೆಶಾಯ 41:14, ತೀತ 2:14) ರಕ್ಷಣೆಯ ಇತಿಹಾಸದ ಸಮಯದಲ್ಲಿ ಧರ್ಮೋಪದೇಶಕಾಂಡ ಪುಸ್ತಕವು ಪ್ರಕಟಿಸುವುದೇನೆಂದರೆ ಕರ್ತನು ಹೇಗೆ ಉಂಟುಮಾಡಿದನು ಪರಿಪಾಲಿಸುವನು, ತನ್ನ ಜನರನ್ನು ಇಸ್ರಾಯೇಲ್ ಮಕ್ಕಳು ಅಂತ್ಯದಲ್ಲಿ ಕಾನನ

* ಈ ವಾರದ ಪಾಠವನ್ನು ಅಕ್ಟೋಬರ್ 9ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ದೇಶವನ್ನು ಪ್ರವೇಶಿಸುವಾಗ, ಮೋಶೆಯು ಅವರಿಗೆ ಇತಿಯಾಸದ ಪಾಠವನ್ನು ಕೊಟ್ಟನು. ಸತ್ಯವೇದದ ಉದ್ದಕ್ಕೂ ತಿಳಿಸುವುದೇನೆಂದರೆ, ಭೂತಕಾಲದಲ್ಲಿ ಕರ್ತನು ನಿಮಗೆ ಮಾಡಿದ್ದನು ನೆನಪಿಗೆ ತೆಗೆದುಕೊಳ್ಳಿ. ವಾಗ್ದಾನ ಮಾಡಿದ ಉತ್ತಮ ದೇಶದ ಗಡಿಯಲ್ಲಿ ಇರುವ ನಮಗೆ, ಈ ಎಚ್ಚರಿಕೆಯು ನಮಗೆ ಅರ್ಥಕೊಡುತ್ತದೆ.

"ನಮ್ಮ ಇತಿಹಾಸವನ್ನು ಪುನರ್ ರಚಿಸುವಾಗ, ನಮ್ಮ ಈಗಿನ ಸ್ಥಿತಿಗೆ ನಾವು ಪ್ರಯಾಣಿಸುವಾಗ... ನಮಗೆ ಆಶ್ಚರ್ಯದಿಂದ ತುಂಬಿದವನಾಗಿ ಮತ್ತು ಕ್ರಿಸ್ತನು ನಮ್ಮ ನಾಯಕನು ಎಂದು ವಿಶ್ವಾಸ ಮೂಡುತ್ತದೆ. ನಮ್ಮ ಭವಿಷ್ಯಕ್ಕಾಗಿ ನಾವು ಭಯಪಡುವ ಅವಶ್ಯಕತೆ ಇಲ್ಲ. ಕರ್ತನು ನಮ್ಮನ್ನು ಹೇಗೆ ನಡೆಸಿಕೊಂಡು ಬಂದದನ್ನು ಮತ್ತು ನಮ್ಮ ಭೂತಕಾಲದ ಇತಿಹಾಸದಲ್ಲಿ ಆತನ ಬೋಧನೆಯನ್ನು ಮರೆಯಬಾರದು (ಎಲೆನ್ ಜಿ ವೈಟ್– ಲೈಫ್ ಸ್ಕೆಚ್, ಪುಟ 196).

**ಭಾನುವಾರ** **ಅಕ್ಟೋಬರ್ 3**

## ಮೋಶೆಯ ಸೇವೆ

ಸತ್ಯವೇದ ಎಲ್ಲಾ ಭಾಗದಲ್ಲಿ ಮೋಶೆಯ ಪ್ರಸನ್ನತೆಯನ್ನು ಕಾಣುತ್ತೇವೆ. ವಿಮೋಚನಕಾಂಡ 2:2ರ ತನಕ ಆತನ ಬಗ್ಗೆ ದಾಖಲಾಗದಿದ್ದರೂ ಆತನೇ ಆದಿಕಾಂಡ ಪುಸ್ತಕವನ್ನು ಬರೆದವನು. ದೇವರ ಅಧಿಕಾರ ಮತ್ತು ಅಡಿಪಾಯದ ಕಥೆ, ನಾವು ಯಾರು ಇಲ್ಲಿಗೆ ಹೇಗೆ ಬಂದೆವು. ಯಾಕೆ ಇಷ್ಟೊಂದು ಕೆಟ್ಟಿದೆ. ಆದರೂ ನಮಗೆ ನಿರೀಕ್ಷೆ ಇದೆ. ಸೃಷ್ಟಿ, ಪಾಪ, ವಿಮೋಚನೆಯ ವಾಗ್ದಾನ, ಜಲಪ್ರಳಯ ಅಬ್ರಹಾಮ್ ಸುವಾರ್ತೆ – ಇವೆಲ್ಲವೂ ಆದಿಕಾಂಡ ಪುಸ್ತಕದಲ್ಲಿ ಬೇರೂರಿದೆ. ಇವೆಲ್ಲಕ್ಕೂ ಪ್ರವಾದಿಯಾದ ಮೋಶೆಯೇ ಮುಖ್ಯಸ್ಥ. ಈ ಒಬ್ಬ ಮನುಷ್ಯನು ಎಷ್ಟು ಪ್ರಭಾವ ಬೀರಿದ್ದಾನೆ. ಕಡಿಮೆ ಪಾಪದ ಜೊತೆ ಆದರೂ ದೇವರ ಮೇಲೆ ಹೆಚ್ಚು ಪ್ರಭಾವ ಬೀರಿದ ಯಾಕೆಂದರೆ ಆತನು ಕರ್ತನನ್ನು ಪ್ರೀತಿಸಿ ಮತ್ತು ಆತನನ್ನು ಸೇವಿಸಿದನು.

ವಿಮೋಚನಕಾಂಡ 32:29–32ನ್ನು ಓದಿ. ಬಂಗಾರದ ಬಸವನಮೂರ್ತಿಯ ಮಹಾ ಪಾಪದ ನಂತರ ದೇವರ ಮತ್ತು ಮೋಶೆಯ ನಡುವೆ ನಡೆದ ಸಂಭಾಷಣೆ. ಇದು ಮೋಶೆಯ ಬಗ್ಗೆ ಯಾವ ಪಾಠವನ್ನು ಕಲಿಸುತ್ತದೆ ಹಾಗೂ ಯಾವುದೇ ಬಲಹೀನತೆ ಇದ್ದರು. ಯಾಕೆ ಕರ್ತನು ಆತನನ್ನು ಬಹಳ ಬಲಮಯವಾಗಿ

ಉಪಯೋಗಿಸಿದ?

ಮೋಶೆಯ ಪಾಪದಲ್ಲಿ ಪಾಲುಗಾರನಾಗದಿದ್ದಾಗ್ಯೂ ಪಾಪಮಯವಾದ ಜನರಿಗೆ, ದೇವರಲ್ಲಿ ವಿಜ್ಞಾಪಿಸಿದನು. ತನ್ನ ಸ್ವಂತ ಜೀವವನ್ನು ಅವರಿಗೋಸ್ಕರ ಕೊಡಲು ಸಿದ್ಧನಿದ್ದನು. ವಿಮೋಚನಕಾಂಡ 32:33ರಲ್ಲಿ "ಮೋಶೆಯು, ದೇವರಲ್ಲಿ ಅವರ ಪಾಪವನ್ನು ಕ್ಷಮಿಸಲು" ಕೇಳಿದ.

ಮೋಶೆಯು ಪಾಪದ ಭಾರವನ್ನು ಅರ್ಥಮಾಡಿಕೊಂಡು ಅದರಿಂದ ಬಿಡುಗಡೆ ಮಾಡಲು ದೇವರನ್ನೇ ಅವರ ಪಾಪವನ್ನು "ಹೊರಲು" ಕೇಳಿದ. ಇದೊಂದೇ ರೀತಿ ಅವರ ಪಾಪದಿಂದ ಅಥವಾ ಯಾವುದೇ ಪಾಪವು ಕ್ಷಮಿಸಲ್ಪಡಲು ಸಾಧ್ಯ. ಸತ್ಯವೇದದಲ್ಲೂ, ಬದಲಿಯು ಶಕ್ತಿಮಯವಾದ ಭಾವವನ್ನು ಕಾಣುತ್ತೇವೆ. ದೇವರೇ ಸ್ವತಃ ನಮ್ಮ ಪಾಪದ ದಂಡವನ್ನು ಕ್ರಿಸ್ತನೇ ವೈಯಕ್ತಿಕವಾಗಿ ಹೊತ್ತನು. ದೇವರೇ ಮುಂದಾಗಿ ಯೋಜಿಸಿದ ಮಾರ್ಗದಲ್ಲಿ ಮಾನವರ ರಕ್ಷಣೆಯು ತನ್ನ ಸರ್ಕಾರ ನಿಯಮಕ್ಕೂ ಮತ್ತು ಆಜ್ಞೆಗಳಿಗೆ ಬದ್ಧನಾಗಿದ್ದನು.

ಅನೇಕ ಶತಮಾನಗಳ ನಂತರ ಪೇತ್ರನು ಕ್ರಿಸ್ತನ ಬಗ್ಗೆ ಬರೆದಿದ್ದಾನೆ. "ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ, ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು" (1 ಪೇತ್ರನು 2:24) ಕ್ರಿಸ್ತನು ನಮಗಾಗಿ ವಿಜ್ಞಾಪನೆ ಮಾಡುವುದನ್ನು ಮೋಶೆಯು ಪಾಪಮಯವಾದ ಜನರಿಗಾಗಿ ವಿಜ್ಞಾಪಿಸಿದನ್ನು ಈ ಕಥೆಯಲ್ಲಿ ಕಾಣುತ್ತೇವೆ (ಇಬ್ರಿಯ 7:25).

ತನ್ನ ಜನರಿಗಾಗಿ ತನ್ನ ಸ್ವಂತ ಜೀವವನ್ನು ಕಳೆದುಕೊಳ್ಳಲು ಸಿದ್ಧನಾಗಿದ್ದನು? ಈ ವಾಕ್ಯದ ಅರ್ಥವನ್ನು ಗಮನಿಸಿ. ಇತರರನ್ನು ಪ್ರೀತಿಸುವ ಅರ್ಥವನ್ನು ನಾವು ಅವರಿಂದ ಕಲಿಯಬಹುದು.

**ಸೋಮವಾರ** **ಅಕ್ಟೋಬರ್ 4**

## ನೆರವೇರಿದ ಪ್ರವಾದನೆ

ಆಧುನಿಕ ವಿಜ್ಞಾನವು ಕೆಲವು ತಪ್ಪುಗಳನ್ನು ಸತ್ಯವೆಂದು ಪ್ರಸರಿಸಲು ಪ್ರಯತ್ನಿಸಿದಾಗಲೂ (ನಮ್ಮ ವಿಶ್ವವು "ಬರಿ ಶೂನ್ಯದಿಂದ" ಪ್ರಾರಂಭವಾಯಿತು

ಅಥವಾ ಈ ಲೋಕದ ಮೇಲೆ ಜೀವವು ಅಕಸ್ಮಿಕವಾಗಿ ಸರಳ ರಾಸಾಯನಿಕ ವಸ್ತುಗಳಿಂದ ಪ್ರಾರಂಭವಾಯಿತು). ದೇವರ ಸೃಷ್ಟಿಯ ಶಕ್ತಿಗೆ ವಿಜ್ಞಾನವು ಕೆಲವು ಆಶ್ಚರ್ಯವಾದ ಒಳನೋಟವನ್ನು ಕೊಟ್ಟಿದೆ.

ಪ್ರಾಕೃತಿಕ ಲೋಕದಲ್ಲಿ ಅನೇಕ ಅಂಶಗಳನ್ನು ಅಂದರೆ, ಏಕಮತ, ಸಮತೂಕ ಮತ್ತು ನಿಷ್ಕೃಷ್ಟತೆಗಳನ್ನು ಈ ಪಾಪಮಯ ಸ್ಥಿತಿಯಲ್ಲೂ ಅಧ್ಯಯನ ಮಾಡಿದಾಗಲೂ ಆಶ್ಚರ್ಯವನ್ನು ಉಂಟುಮಾಡುತ್ತದೆ.

ದೇವರು, ಶಾರೀರಿಕ ವಸ್ತುಗಳ ವಿಷಯದಲ್ಲಿ ಇಷ್ಟು ಸಮಂಜಸವಾಗಿದ್ದರೆ, ಆತ್ಮೀಕವಾದ ವಿಷಯದಲ್ಲಿ ಇನ್ನೂ ಹೆಚ್ಚು ಸಮಂಜಸವಾಗಿದೆ. ಆದುದರಿಂದ ಧರ್ಮೋಪದೇಶಕಾಂಡದ ಪ್ರಾರಂಭದ ವಚನಗಳಲ್ಲಿ, ದೇವರ ನಂಬಲಾಗದ ಸಮಂಜಸವನ್ನು ಕಾಣುತ್ತೇವೆ.

ಧರ್ಮೋಪದೇಶಕಾಂಡ 1:1–6ನ್ನು ಓದಿ. ಧರ್ಮೋ 1:4ರಲ್ಲಿ 40ನೇ ವರ್ಷದಲ್ಲಿ ಎಂದು ಹೇಳುವ ಪ್ರವಾದನ ಯಾವ ಭಾವವನ್ನು ತಿಳಿಸುತ್ತದೆ?

ಅಪಜಯವಾದ ನಂತರ, ಮೋಶೆಯು ಕಾದೇಶ್ ಬರ್ನೆಯದಿಂದ ಗೂಡಾಚಾರರನ್ನು ಕಳುಹಿಸಿ, ಆ ದೇಶವನ್ನು ವೀಕ್ಷಿಸಲು ಕಳುಹಿಸಿದಾಗ ಜನರು ಆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲು ನಿರಾಕರಿಸಿದರೆ ಏನಾಯಿತು? ನಿರೀಕ್ಷಿಸಿದಾಗ ಅವರು ವಾಗ್ದಾನದ ದೇಶಕ್ಕೆ ಪ್ರವೇಶವಾಗುವುದಿಲ್ಲ ಎಂದು ಹೇಳಿದ. ಆ ದೇಶವನ್ನು ಪ್ರವೇಶಿಸಲು ಎಷ್ಟು ಕಾಲ ಕಾಯಬೇಕಿತ್ತು? "ನೀವು ಆ ದೇಶವನ್ನು ಸಂಚರಿಸಿ ನೋಡಿದ 40 ದಿನಗಳಿಗೆ ಸಮಾನಾಗಿ ದಿನ ಒಂದಕ್ಕೆ ಒಂದು ಸಂವತ್ಸರದ ಮೇರೆಗೆ 40 ವರುಷದ ನಿಮ್ಮ ಪಾಪದ ಫಲವನ್ನು ಅನುಭವಿಸುವವರಾಗಿ ನಾನು 'ಕೈ ಬಿಟ್ಟವರ ಗತಿ ಎಂಥದೆಂದು ತಿಳಿದುಕೊಳ್ಳಬೇಕು" (ಅರಣ್ಯಕಾಂಡ 14:34).

ಧರ್ಮೋಪದೇಶಕಾಂಡ ಆ 40ನೇ ವರುಷದಿಂದ ಪ್ರಾರಂಭವಾಗುತ್ತೆ ನಿಶ್ಚಯವಾಗಿ ದೇವರು ಹೇಳಿದ ಹಾಗೆ ಮತ್ತೊಂದು ವಾಕ್ಯದಲ್ಲಿ ಹೇಳುವುದಾದರೆ ದೇವರ ಪ್ರವಾದನಾ ವಾಕ್ಯವು, ದೇವರಷ್ಟೆ ಭರವಸೆಯುಳ್ಳದ್ದು. ದೇವರು ತಾನು ಹೇಳಿದನ್ನು ಮಾಡುತ್ತಾನೆ, ಮಾಡುವುದನ್ನೇ ಹೇಳುತ್ತಾನೆ.

ಖಂಡಿತವಾಗಿ ಇದೊಂದು ಸಾರಿಯಲ್ಲ ದೇವರು ಹೇಳಿದ ಹಾಗೆ ಪ್ರವಾದನಾ ಸಮಯವು ನೆರವೇರುವುದು. ಇಂದು ಅನುಕೂಲವಾದ ಅಂಶವನ್ನು ದಾನಿಯೇಲ 9:24–27ರಲ್ಲಿ ಗಮನಿಸಿದಾಗ ಉದಾಹರಣೆಗೆ ಕ್ರಿಸ್ತನ ಕಾಲವಾದಿಯು ಕರ್ತನು ಹೇಳಿದ ಹಾಗೆ ನೆರವೇರಿತು "ಒಂದು ಕಾಲ, ಎರಡು ಕಾಲ ಮತ್ತು ಅರ್ಧಕಾಲ" (ದಾನಿ 7:25, ಪ್ರಕಟನೆ 12:6, 14 ಪ್ರಕಟನೆ 13:5). ಇದು ಇತಿಹಾಸದಲ್ಲಿ ನೆರವೇರಿದೆ ಹಾಗು ದಾನಿಯೇಲ 8:14ರಲ್ಲಿ ಹೇಳಿದ 2300 ದಿನಗಳೂ ಕೂಡ.

ದಾನಿಯೇಲ 2,7,8 ರಲ್ಲಿ ಹೇಳಿರುವ ಪ್ರವಾದನಾ ಸಮಯಗಳು ಖಚಿತವಾಗಿ ಲೋಕದ ಇತಿಹಾಸದಲ್ಲಿ ನೆರವೇರಿದ ವಿಷಯಗಳು, ದೇವರ ಪೂರ್ವಜ್ಞಾನ, ನಿಯಂತ್ರಣ ಮತ್ತು ಭರವಸೆಯ ಮಿತಿಮೀರಿದ ಮತ್ತು ಸಾಕ್ಷಿಯನ್ನು ಕೊಟ್ಟಿದೆ. ಹಿಂದೆ ಪ್ರವಾದಿಸಲ್ಪಟ್ಟ ಹಾಗೆ ಕರ್ತನು ನಂಬಿಗಸ್ತನಾಗಿ ನೆರವೇರಿಸದ್ದನ್ನು ಕಾಣುತ್ತೇವೆ. ಇದು ನಮಗೆ ಯಾಕೆ ಭರವಸೆಯನ್ನು ಕೊಡುತ್ತದೆ, ಯಾಕೆಂದರೆ ಆತನು ಹೇಳಿದ ಹಾಗೆ ಮುಂದೆಯೂ ನೆರವೇರುವುದು ನಿಶ್ಚಯ.

**ಮಂಗಳವಾರ** **ಅಕ್ಟೋಬರ್ 5**

## ಒಂದು ಸಾವಿರ ಸಮಯಕ್ಕಿಂತಲೂ ಅಸಂಖ್ಯವಾಗಿ

ಅರಣ್ಯದಲ್ಲಿ ಬಹಳ ಪ್ರಯಾಣ ಮಾಡಿದ ಮೇಲೆ, ಕರ್ತನಿಗಾಗಿ ಮೋಶೆಯು ಮಾತನಾಡಿದನು (ಆತನು ಪ್ರವಾದಿಯಾಗಿದ್ದರೂ ಅದಕ್ಕಿಂತಲೂ ಹೆಚ್ಚಿನವನು) ಹೇಳಿದ್ದು: "ಆ ದೇಶವನ್ನು ನಿಮಗೇ ಕೊಟ್ಟಿದ್ದೇನೆ, ಯೆಹೋವನೆಂಬ ನಾನು ನಿಮ್ಮ ಪಿತೃಗಳಾದ ಅಬ್ರಾಹಾಮ್, ಇಸಾಕ್, ಯಾಕೋಬರಿಗೂ ಅವರ ಸಂತತಿಯುವರಿಗೂ ಆ ದೇಶವನ್ನು ಪ್ರಮಾಣ ಪೂರ್ವಕವಾಗಿ ವಾಗ್ದಾನ ಮಾಡಿದೆನಲ್ಲಾ. ಅದರಲ್ಲಿ ಪ್ರವೇಶ ಮಾಡಿ ಸ್ವಾಧೀನ ಮಾಡಿಕೊಳ್ಳಿ" (ಧರ್ಮೋ 1:8) ಹೇಗೂ ಮುಂದೆ ಬರುವುದನ್ನು ಗಮನಿಸಿ :

ಧರ್ಮೋಪದೇಶಕಾಂಡ 1:9–11 ನ್ನು ಓದಿ. ಈ ಪದಗಳ ಪ್ರಾಮುಖ್ಯತೆ ಏನು? ಅವರು ಕಾದೇಶ್ ಬರ್ನೆಯದಲ್ಲಿ ಪ್ರತಿಭಟಿಸಿದ ಪ್ರಯುಕ್ತವಾಗಿ ದೇವರು ಅವರನ್ನು ಶಿಕ್ಷಿಸಿದ.

ದೇವರು ಕೃಪಾಪೂರ್ಣನು ಎಂಬುದಕ್ಕೆ ಮತ್ತೊಂದು ಉದಾಹರಣೆಯನ್ನು ಕಾಣುತ್ತೇವೆ. ಅರಣ್ಯದಲ್ಲಿ ಅವರು ಅಲೆದಾಗಲೂ ಅವನು ಆಶೀರ್ವದಿಸಲ್ಪಟ್ಟರು".

ನಾಲ್ವತ್ತು ವರುಷ ಅವರನ್ನು ಅರಣ್ಯದಲ್ಲಿ ಸಾಕುತ್ತಾ ಇದ್ದಿ, ಅವರಿಗೆ ಯಾವ ಕೊರತೆಯೂ ಇರಲಿಲ್ಲ. ಅವರ ಬಟ್ಟೆಗಳು ಜೀರ್ಣವಾಗಲಿಲ್ಲ ಕಾಲುಗಳು ಬಾತುಹೋಗಲಿಲ್ಲ" (ನೆಹೆಮೀಯ 9:21) ಮೋಶೆಯು ತಿರುಗಿ ತನ್ನ ಜನರಿಗೆ ಪ್ರೀತಿಯನ್ನು ತೋರಿಸಿ, ಹಿಂದೆ ಮಾಡಿದಕ್ಕಿಂತಲೂ ಸಾವಿರ ಸಾರಿ ಆಶೀರ್ವದಿಸಲು ಕೇಳಿಕೊಳ್ಳುತ್ತಾನೆ. ಧರ್ಮೋಪದೇಶಕಾಂಡ 1:12–17ನ್ನು ಓದಿ. ದೇವರ ಆಶೀರ್ವಾದ ಪರಿಣಾಮವಾಗಿ ಅವರಿಗೆ ಏನು ಆಯಿತು? ಮತ್ತು ಮೋಶೆಯು ಆ ಪರಿಸ್ಥಿತಿಯನ್ನು ಎದುರಿಸಲು ಯಾವ ಕ್ರಮ ಕೈಗೊಂಡನು?

ದೇವರು ಅವರ ಮಧ್ಯದಲ್ಲಿ ಬಲಶಾಲಿಯಾಗಿ ಪ್ರಸನ್ನನಾಗಿದ್ದಾಗಿಯೂ ಒಂದು ವ್ಯವಸ್ಥಾಪನೆಯ ರಚನೆಗಾಗಿಯೂ, ಹೊಣೆಗಾರಿಕೆಯ ಪದ್ಧತಿಗೆ ಅವಶ್ಯವಿತ್ತು. ಇಸ್ರಾಯೇಲ್ ಒಂದು ಕೊಯ್ಯಾಲ್ ಆಗಿತ್ತು ಅಂದರೆ ಒಂದು ವ್ಯವಸ್ಥಾಪಿತವಾದ ಸಭೆಯಾಗಿತ್ತು. (ಧರ್ಮೋಪದೇಶಕಾಂಡ 31:30ನ್ನು ನೋಡಿ) ಹೊಸ ಒಡಂಬಡಿಕೆಗೆ ಅದು ಮುನ್ಸೂಚಕವಾಗಿತ್ತು. ಗ್ರೀಕ್‌ನಲ್ಲಿ ಎಕ್‌ಲಿಶಿಯ ಎಂದರೆ ಸಭೆ (ಮತ್ತಾಯ 16:18 ನೋಡಿ) ಬೇರೆ ಬೇರೆ ಹಿನ್ನೆಲೆಯಲ್ಲಿ ಕೆಲಸ ಮಾಡಿದಾಗ್ಯೂ ಪೌಲನು ಯೆಹೂದ್ಯರ ಮೂಲದಿಂದ ದೂರವಾಗಿರಲಿಲ್ಲ ಮತ್ತು 1 ಕೊರಿಂಥ 12ರಲ್ಲಿ ಆತನು ಸ್ಪಷ್ಟವಾಗಿ ವರ್ಣಿಸುವುದನ್ನು ಕಾಣುತ್ತೇವೆ. ಅದೇನೆಂದರೆ ಗುಣಮಟ್ಟದ ಜನರು ಬೇರೆ ಬೇರೆ ಪಾತ್ರಗಳನ್ನು ವಹಿಸಿಕೊಂಡು ಸಭೆಯಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಅವಶ್ಯವಾಗಿತ್ತು. ಧರ್ಮೋಪದೇಶಕಾಂಡದಲ್ಲಿ ನಾವು ನೋಡುವ ಹಾಗೆ ಮತ್ತು ಅರಣ್ಯದಲ್ಲೂ ಈ ಒಂದು ಸಭೆಯ ವ್ಯವಸ್ಥೆಯನ್ನು ಕಾಣುತ್ತೇವೆ. ಹಿಂದಿನ ಕಾಲದಲ್ಲಿ ಕೊಯ್ಯಲ್ ಇದ್ದ ಹಾಗೆ ಈಗಿನ ಸಭೆಯು ಒಂದಾಗಿ ಬೇರೆ ಬೇರೆ ಪಾತ್ರವನ್ನು ಅವರ ವರದಾನಗಳ ಮೇರೆಗೆ ವಹಿಸುವುದು ಅವಶ್ಯ. ವ್ಯವಸ್ಥಾಪಿತವಾದ ಧರ್ಮಕ್ಕೆ ಅನೇಕ ಬಾರಿ ಜನರು ಅಡ್ಡಿ ಮಾಡುವುದನ್ನು ಕೇಳುತ್ತೇವೆ (ಅದರರ್ಥ ಅವರು ಅವ್ಯವಸ್ಥೆಯಾದ ಧರ್ಮವನ್ನು ಬಯಸುತ್ತಾರೆ) ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ ದೇವರವಾಕ್ಯವು ವ್ಯವಸ್ಥಿತವಾದದೊಂದನ್ನೇ ಹೊರತು ಮತ್ತ್ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ.

**ಬುಧವಾರ** **ಅಕ್ಟೋಬರ್ 6**

## ಕಾದೇಶ್ ಬರ್ನೇಯ

ಧರ್ಮೋಪದೇಶಕಾಂಡದ ಪುಸ್ತಕದ ಪೂರ್ವಭಾಗದಲ್ಲಿ ಒಂದು ಭೀತಿ ಕಾಡುತ್ತಿದೆ. ಕಾದೇಶ್ ಬರ್ನೇಯದ ಭೀತಿ. ಈ ದುರ್ದೈವಿಯಾದ ಕಥೆಯನ್ನು ನೋಡಿದಾಗ. ಇದು ಧರ್ಮೋಪದೇಶಕಾಂಡ ಪುಸ್ತಕಕ್ಕೆ ಒಂದು ಹಿನ್ನೆಲೆ ಆಗುತ್ತದೆ. ಒಂದು ಸಮೀಪ ನೋಟ ಅವಶ್ಯ.

ಅರಣ್ಯಕಾಂಡ 14ನ್ನು ಓದಿ. ಆ ಗೂಢಚಾರರ ವರದಿಗೆ ಜನರು ಹೇಗೆ ಪ್ರತಿಕ್ರಿಯಿಸಿದರು ಮತ್ತು ಅವರ ಪ್ರತಿಕ್ರಿಯೆಯ ಫಲಿತಾಂಶವೇನಾಯಿತು? (ಧರ್ಮೋಪದೇಶಕಾಂಡ 1:20–26 ನೋಡಿ).

ಅನೇಕ ಮುಖ್ಯವಾದ ಪಾಠಗಳನ್ನು ಈ ಕಥೆಯಿಂದ ಸಂಗ್ರಹಿಸಬಹುದು. ಆದರೆ ಒಂದು ಮುಖ್ಯವಾದ ಪಾಠ ಈ ಪುಸ್ತಕದಲ್ಲಿ ಮತ್ತೆ ಮರಳಿ ಬರುವುದನ್ನು ಅರಣ್ಯಕಾಂಡ 14ರಲ್ಲಿಯು ಕಾಣಬಹುದು.

ಅರಣ್ಯಕಾಂಡ 14:11–20 ನ್ನು ಓದಿ. ಮೋಶೆಯು ಮತ್ತೆ ಮಧ್ಯಸ್ತಿಕೆಯ ಪಾತ್ರವನ್ನು ಹೊಂದುವುದನ್ನು ಕಾಣುತ್ತೇವೆ. ಕರ್ತನ ಕೂಡ, ಅವರನ್ನು ನಾಶಮಾಡದಂತೆ ವಾದ ಮಾಡುವುದು ಪ್ರಾಮುಖ್ಯವಾದುದು.

ದೇವರಿಗೆ, ಮೋಶೆಗೆ ಹೇಳುವುದನ್ನು ಗಮನಿಸಿ. ನೀನು ಇದನ್ನು ಮಾಡಿದರೆ ಐಗುಪ್ತರ ಮತ್ತು ಬೇರೆ ರಾಜ್ಯದ ದೃಷ್ಟಿಯಲ್ಲಿ ನೀನು ಹೇಗೆ ಕಾಣುತ್ತೆ ಎಂದು ನೋಡು. ಈ ಅಂಶವು ಬಹಳ ಮುಖ್ಯವಾದದ್ದು. ಯಾಕೆಂದರೆ ಇಸ್ರಾಯೇಲ್ಯರಿಗೆ ಮಾಡುವಂತದ್ದು ಬರೀ ಇಸ್ರಾಯೇಲ್ಯರಿಗೆ ಮಾತ್ರವಲ್ಲ ಎಲ್ಲಾ ಮಾನವರಿಗಾಗಿ. ಇಸ್ರಾಯೇಲ್ ರಾಜ್ಯವು ಲೋಕಕ್ಕೆ ಬೆಳಕಾಗಬೇಕಿತ್ತು. ಸತ್ಯದೇವರ ಪ್ರೀತಿ, ಶಕ್ತಿ ರಕ್ಷಣೆಗೆ ಅವರು ಸಾಕ್ಷಿಯಾಗಿರಬೇಕಿತ್ತು. ಈ ರಕ್ಷಣೆಯು ಜನರು ಆರಾಧಿಸುವ ವಿಗ್ರಹಗಳಲ್ಲಿ ಅಲ್ಲ.

ಹೇಗೂ ಮೋಶೆ ಹೇಳಿದ್ದು ಈ ಜನರನ್ನು ನಾಶಮಾಡಿದರೆ ಮುಂದೇನು? ಬೇರೆ ರಾಜ್ಯದವರು ಹೇಳುವರು. ಕರ್ತನು ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶದಲ್ಲಿ ಆ ಜನರನ್ನು ಸೇರಿಸುವುದಕ್ಕೆ ಶಕ್ತಿ ಸಾಲದೆ ಅವರನ್ನು

ಅರಣ್ಯದಲ್ಲಿ ಕೊಂದುಹಾಕಿ ಬಿಟ್ಟನು ಎಂದು ಮಾತಾಡಿಕೊಳ್ಳುವರು (ಅರಣ್ಯಕಾಂಡ 14:16).

ದೇವರು ತನ್ನ ಜನರಲ್ಲಿ ಮಹಿಮೆ ಹೊಂದತಕ್ಕದ್ದು. ದೇವರ ಪ್ರೀತಿ, ಶಕ್ತಿಯು ತನ್ನ ಸಭೆಗೆ ಪ್ರಕಟವಾಗತಕ್ಕದ್ದು. ಅಂತಿಮವಾಗಿ ದೇವರಿಗೆ ಭೂಮಿಯ ಮೇಲೆ ಮಹಿಮೆ ಆಗತಕ್ಕದ್ದು.

ಎಫೆಸದವರಿಗೆ 3:10ನ್ನು ಓದಿ. ಪೌಲನು ಇಲ್ಲಿ ಹೇಳುವುದು ಏನು? ಇದು ಹೇಗೆ ಆಗುತ್ತದೆ? ಹೇಗೆ ದೇವರ ವಿಧವಾದ ಜ್ಞಾನವು ಈ ಲೋಕಕ್ಕೆ ಗೊತ್ತಾಗುವುದು? ಈ ಕಾರ್ಯವನ್ನು ಮಾಡಲು ವೈಯಕ್ತಿಕವಾಗಿ ಯಾವ ಪಾತ್ರವನ್ನು ವಹಿಸತಕ್ಕದ್ದು?

**ಗುರುವಾರ** **ಅಕ್ಟೋಬರ್ 7**

## ಅಮೋರಿಯರ ದುಷ್ಟತನ

ದೇವರ ಆಶೀರ್ವಾದದಿಂದ, ಹೇಗೆ ಅವರು ತಮ್ಮ ವೈರಿಗಳನ್ನು ನಾಶ ಮಾಡಿದರೆಂದು ಮತ್ತು ಅವರು ದೇವರಿಗೆ ನಂಬಿಗಸ್ತರಾಗಿದ್ದಾಗ ದೇವರು ಅವರಿಗೆ ಬಲಿಷ್ಠರ ಮೇಲೆ ಜಯವನ್ನು ಕೊಟ್ಟದ್ದನ್ನು ಇಸ್ರಾಯೇಲ್ಯರ ಇತಿಹಾಸವನ್ನು ಮೋಶೆಯು ಧರ್ಮೋಪದೇಶಕಾಂಡ 2 ಮತ್ತು 3 ರಲ್ಲಿ ವಿಸ್ತಾರವಾಗಿ ವರ್ಣಿಸಿದ್ದಾನೆ. (ಧರ್ಮೋಪದೇಶಕಾಂಡ 2:11, 20, ಧರ್ಮ 3:13).

ಈ ಜನರ ನಾಶನದ ವಿಷಯದಲ್ಲಿ ಸ್ವಲ್ಪವಾದರೂ ನೋಡಬೇಕಾಗಿದೆ. ಯಾಕೆಂದರೆ ಇದು ಒಂದು ಕಷ್ಟಕರವಾದ ವಿಷಯ. ಸಹಜವಾಗಿ ಇಸ್ರಾಯೇಲ್ ಜನರು ಬೇರೆ ಜನಾಂಗದವರೊಂದಿಗೆ ಮೊದಲು ಸಮಾಧಾನದಿಂದ ಮಾತನಾಡುವರು (ಧರ್ಮೋಪದೇಶಕಾಂಡ 20:10,11). ಆದರೂ ಆ ಜನರು ಆ ಪ್ರಸ್ತಾಪವನ್ನು ಒಪ್ಪದಿದ್ದರೆ ಇಸ್ರಾಯೇಲ್ಯರು ಹೋಗಿ ಅವರನ್ನು ಅಂದರೆ ಮಕ್ಕಳು ಮತ್ತು ಮಹಿಳೆಯರನ್ನು ಸಂಪೂರ್ಣವಾಗಿ ನಾಶಮಾಡುತ್ತಿದ್ದರು. ನಮ್ಮ ಕರ್ತನಾದ ದೇವರು ಅವರನ್ನು ನಮಗೆ ಪರಾಜಯ ಪಡಿಸುತ್ತಿದ್ದನ್ನು ನಾವು ಅವರನ್ನೂ ಮತ್ತು ಅವರ ಮಕ್ಕಳನ್ನೂ ಜನರೆಲ್ಲರನ್ನೂ ಸಂಹರಿಸಿದೆವು. ಒಬ್ಬನನ್ನೂ ಉಳಿಸಲಿಲ್ಲ (ಧರ್ಮೋಪದೇಶಕಾಂಡ 2:33,34).

ಕೆಲವರು ಇದೆಲ್ಲ ಸುಳ್ಳು ಎಂದು ಹೇಳುವಾಗಲೂ ಹೇಗೂ ನಾವು ನಂಬುತ್ತೇವೆ ಯಾಕೆಂದರೆ "ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ, ಖಂಡನೆಗೂ, ತಿದ್ದು ಪಾಟಿಗೂ, ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ (2 ತಿಮೊಥೆಯನಿಗೆ 3:16). ಆದರೂ ಇದು ಸೆವೆಂತ್ ಡೇ ಅಡ್ವೆಂಟಿಸ್ಟ್‌ಗೆ ಇದು ಆಯ್ಕೆಯಲ್ಲ ಒಂದು ಸಮರ್ಥವಾದ ಆಯ್ಕೆಯಲ್ಲ.

ಆದಿಕಾಂಡ 15:1–6 ಓದಿ, ದೇವರು ಅಬ್ರಾಮನಿಗೆ ಆದಿಕಾಂಡ 15:16ರಲ್ಲಿ ಹೇಳಿದ್ದೇನು? ಮತ್ತು ಇದು ಯಾವ ಬೆಳಕನ್ನು ಕೊಡುತ್ತದೆ? ಯಾಕೆಂದರೆ ಆಗಲೇ ಅವರು ಬಹಳ ಕ್ರೂರಿಗಳಾಗಿದುದರಿಂದ ಆ ಅನ್ಯಜನಾಂಗದವರು ದೇವರ ಕೋಪಕ್ಕೆ ಪಾತ್ರರಾಗಿ ಶಿಕ್ಷೆಗೆ ಗುರಿಯಾದರು. ದೇವರು ತಾಳ್ಮೆಯಿಂದ ಅವರು ಬದಲಾಗುತ್ತಾರೆಂದು ಕಾದು ನೋಡಿದಾಗ್ಯೂ ಆದರೆ ಅವರು ಬದಲಾಗಲಿಲ್ಲ. ಆದುದರಿಂದ ದೇವರು ಅವರ ಮಕ್ಕಳನ್ನು ಸಂಹರಿಸಲು ಹೇಳಿದನು (ಇಸ್ರಾಯೇಲ್ಯರಿಂದ ಸಂಹಾರವಾದ ಮಕ್ಕಳಿಗಿಂತ ಪ್ರಳಯದಲ್ಲಿ ಹೆಚ್ಚು ಮಕ್ಕಳು ನಾಶವಾದರು).

ದೇವರು ಒಳ್ಳೆಯವನೆಂದು ಅನೇಕ ಘಟನೆಗಳಿಂದ ತಿಳಿದಾಗ್ಯೂ, ದೇವರು ಪ್ರೀತಿಪೂರ್ಣನು ಮತ್ತು ಆತನ ಮೇಲೆ ನಂಬಿಕೆ ಇಡಬೇಕು. ನಾವು ಗ್ರಹಿಸಲು ಸಾಧ್ಯವಿಲ್ಲದಿದ್ದಾಗ್ಯೂ ದೇವರನ್ನು ನಂಬಬೇಕು.

1 ಕೊರಿಂಥ 10:1–4 ಮತ್ತು ಯೋಹಾನ 14:9 ಓದಿ. ಈ ವಾಕ್ಯಗಳು ಹೇಗೆ ದೇವರ ಪ್ರೀತಿ, ನ್ಯಾಯ ಮತ್ತು ಒಳ್ಳೇತನದ ಮೇಲೆ ಭರವಸೆ ಇಡಲು ಸಾಧ್ಯ?

**ಶುಕ್ರವಾರ** **ಅಕ್ಟೋಬರ್ 8**

**ಹೆಚ್ಚಿನ ಚಿಂತನೆ :** ಇತರ ಜನಾಂಗಗಳಿಗೆ ಇಸ್ರಾಯೇಲ್ಯರು ಏನು ಮಾಡಿದರು ಎಂಬ ಕಠಿಣ ಪ್ರಶ್ನೆಗೆ ಒಬ್ಬ ವಿದ್ವಾಂಸನು ಉತ್ತರಿಸಲು ಪ್ರಯತ್ನಿಸುತ್ತಾನೆ. ಎಲ್ಲವನ್ನೂ ಸೃಷ್ಟಿಸಿದಾತನು ಎಲ್ಲಾ ಮಾನವರ ಮೇಲೆಯೂ ಎಲ್ಲದರ ಮೇಲೆಯೂ ಸರ್ವಾಧಿಪತಿಯಾದ ದೇವರು ತನಗೆ ಏನು ಬೇಕಾದದ್ದನ್ನು ಯಾರಿಗೆ ಬೇಕಾದದ್ದನ್ನು ಮಾಡಿದಾಗ್ಯೂ ಆತನು ಮಾಡಿದ್ದು ಸರಿಯಾಗಿಯೇ ಇರುತ್ತದೆ. ದೇವರ ಮಾರ್ಗಗಳು ಮರ್ಮ ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಯೆಶಾಯ 55:8,9 ಕೆಲವು

ಸಮಾಧಾನವನ್ನು ನೀಡಿ ನಮ್ಮ ಮನಸ್ಸಿನಲ್ಲಿರುವ ಪ್ರಶ್ನೆಗಳಿಗೆ ವಿಶ್ರಮ ನೀಡುತ್ತದೆ. ಸತ್ಯವೇದವು ಚಿತ್ರಿಸುವ ಹಾಗೆ ಕಾನಾನ್ಯರು ಬಹಳ ದುಷ್ಟರು ಅವರ ಸರ್ವ ನಾಶನವು ಅವರ ಪಾಪದ ದೆಸೆಯಿಂದ ದೇವರು ಕೊಟ್ಟ ನ್ಯಾಯತೀರ್ಪು. ಕಾನಾನ್ಯರ ನಾಶನವು ಅದು ಮೊದಲನೆಯ ಬಾರಿಯೂ ಅಲ್ಲ ಕೊನೆಯ ಬಾರಿಯೂ ಅಲ್ಲ. ಕಾನಾನ್ಯರ ಹಾಗೂ ಮಾನವರ ವಿಧಿಬರಹಕ್ಕೂ ವ್ಯತ್ಯಾಸ ಉಂಟು (ನೊಹನ ಕುಟುಂಬ ಹೊರತುಪಡಿಸಿ). ಆದಿಕಾಂಡ 6–9ರ ಅಧ್ಯಾಯದಲ್ಲಿ ವಿವರಿಸಿದಾಗ ತ್ರಾಸು ಮತ್ತು ಕೃತಿಗಳನ್ನು ಒಳಗೊಂಡಿದೆ. ಇಸ್ರಾಯೇಲ್‌ನ ವಿದೇಶಿಯರನ್ನು ಸಂಪೂರ್ಣವಾಗಿ ನಾಶ ಮಾಡಬೇಕೆಂಬ ನಿಯಮವನ್ನು ದೇವರು ಎಂದೂ ಯೋಚಿಸಿದ್ದಿಲ್ಲ. ಧರ್ಮೋಪದೇಶಕಾಂಡ 7:1 ರಲ್ಲಿ ಯಾವ ಜನಾಂಗದವರನ್ನು ಸಂಹರಿಸಬೇಕೆಂದು ಗೊತ್ತುಪಡಿಸಿದ್ದಾನೆ. ಇಸ್ರಾಯೇಲ್ಯರು ಅನ್ಯಜನಾಂಗದವರ ಆಚಾರಗಳನ್ನು ಪಾಲಿಸಬಾರದೆಂದು ದೇವರು ಹೇಳಿದರು.

ಕಾನಾನ್ಯರಿಗಾದ ವಿಧಿಯು ಎಲ್ಲಾ ಪಾಪಿಗಳಿಗೆ ಕೊನೆಯಲ್ಲಿ ಆಗುವುದು. ದೇವರ ನ್ಯಾಯತೀರ್ಪು. ರಕ್ಷಣೆ ಇತಿಹಾಸದಲ್ಲಿ ದೇವರು ಕಾನಾನ್ಯರನ್ನು ನಾಶಮಾಡಲು ಇಟ್ಟ ಹೆಜ್ಜೆಯು ಅವಶ್ಯವಾಗಿತ್ತು.

ಕಾನಾನ್ಯರನ್ನು ನಾಶಮಾಡುವ ಮೊದಲು ದೇವರು ಅವರಿಗೆ 40 ವರ್ಷಗಳಿಂದ ಎಚ್ಚರಿಕೆ ಮುಂದಾಗಿ ಕೊಟ್ಟಿದ್ದ. ಯೆಹೋಶುವನು 2:8–11ರಲ್ಲಿ ರಾಹಬಳು ಮಾಡುವ ಅರಿಕೆಯನ್ನು ಗಮನಿಸಿ.